

# ಕೇರಳ ಚಿತ್ರೋತ್ಸವದಲ್ಲಿ ಬರಗೂರರ ಭೀಮಣ್ಣ

ಬರಗೂರರ ಸಿನಿಮಾಗಳು ಗಾಂಧಿನಗರದಲ್ಲಿ ಸದ್ದು ಮಾಡುವುದು ಕಮ್ಮಿ. ಆದರೆ ವಿವಿಧ ಚಲನಚಿತ್ರೋತ್ಸವಗಳಲ್ಲಿ ಅವು ಸುದ್ದಿಮಾಡುತ್ತಲೇ ಇರುತ್ತವೆ. ಅವರ ಹೊಸ ಸಿನಿಮಾ 'ಬಯಲಾಟದ ಭೀಮಣ್ಣ' ಇದೀಗ ಕೇರಳ ರಾಷ್ಟ್ರೀಯ ಸಿನಿಮೋತ್ಸವದಲ್ಲಿ ಪ್ರದರ್ಶನ ಕಂಡಿದೆ. ಎರ್ನಾಕುಲಂನಲ್ಲಿ ಅ. 18ರಿಂದ 22ರವರೆಗೆ ನಡೆದಿರುವ ಈ ಚಿತ್ರೋತ್ಸವದಲ್ಲಿ ಅ.19ರಂದು 'ಬಯಲಾಟದ ಭೀಮಣ್ಣ' ಸಿನಿಮಾ ಪ್ರದರ್ಶನ ಕಂಡಿದೆ.



ಜನಪದ ಕಲೆ ಬಯಲಾಟವನ್ನೇ ಉಸಿರಾಗಿಸಿಕೊಂಡಿರುವ ಕಲಾವಿದನ ಬದುಕಿನಲ್ಲಿನ ಸ್ಥಿತ್ಯಂತರಗಳನ್ನು ಇಟ್ಟುಕೊಂಡು ಕಟ್ಟಿದ ಸಿನಿಮಾ ಇದು. ಬಯಲಾಟವನ್ನೇ ತನ್ನ ಅಭಿವ್ಯಕ್ತಿಯ ಮಾಧ್ಯಮವಾಗಿಸಿಕೊಂಡಿರುವ ಭೀಮಣ್ಣನಿಗೆ ಸಾಮಾಜಿಕ ನಾಟಕಗಳಲ್ಲಿ ನಟಿಸುವ ಬಯಕೆ ಆಗುತ್ತದೆ. ಸಾಮಾಜಿಕ ನಾಟಕಗಳಲ್ಲಿ ನಟಿಸಿದರೆ ತನ್ನ ಘನತೆ ಹೆಚ್ಚುತ್ತದೆ ಎಂಬುದು ಅವನ ನಂಬಿಕೆ. ಹೀಗಾಗಿ ನಾಟಕದಲ್ಲಿ ನಟಿಸಲು ಪ್ರಯತ್ನಿಸುತ್ತಾನೆ. ಆದರೆ ಅವನ ಆಸೆಗೆ ಊರ ಪ್ರಮುಖ ಅಡ್ಡಗಾಲಿಡುತ್ತಾನೆ.

ಹೀಗೆ ಬಡಪಾಯಿ ಕಲಾವಿದನನ್ನು, ಅವನ ಆಸೆ ಆಕಾಂಕ್ಷೆಗಳನ್ನು ಪಟ್ಟಭದ್ರ ವ್ಯವಸ್ಥೆ ಹಣಿಯುವ, ದಮನಿಸುವ ವ್ಯಥೆ ಈ ಸಿನಿಮಾದ ಕತೆ. ತಮ್ಮದೇ ಒಂದು ನೀಳ್ಗತೆಯನ್ನು ಇಟ್ಟುಕೊಂಡು ಬರಗೂರು ಈ ಸಿನಿಮಾ ಮಾಡಿದ್ದಾರೆ. ಒಂದು ಹಳ್ಳಿಯ ಪುಟ್ಟ ಪ್ರಪಂಚದ ಸಾಮಾನ್ಯ ಕಲಾವಿದನ ಕಥೆಯನ್ನು ಹೇಳುತ್ತಲೇ ದೇಶಮಟ್ಟದಲ್ಲಿ ನಡೆಯುತ್ತಿರುವ ರಾಜಕೀಯ ದುರಂತಗಳನ್ನು ಬಿಂಬಿಸುವ ಪ್ರಯತ್ನ ಅವರದ್ದು.

ಹಿರಿಯ ನಟ ಸುಂದರ್‌ರಾಜ್ ಈ ಚಿತ್ರದಲ್ಲಿ ಬಯಲಾಟದ ಭೀಮಣ್ಣನಾಗಿ ನಟಿಸಿದ್ದಾರೆ. ಕೃಷ್ಣವೇಣಿ ನಂಜಪ್ಪ ಕಾಳೇಗೌಡ ಮತ್ತು ಧನಲಕ್ಷ್ಮಿ ಕೃಷ್ಣಪ್ಪ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಶಮಿತಾ ಮಲ್ನಾಡ್ ಸಂಗೀತ ಚಿತ್ರಕ್ಕಿದೆ. ■

# ರುದ್ರ ಪ್ರಯಾಗದಲ್ಲಿ ಶ್ರದ್ಧಾ ಶ್ರೀನಾಥ್

ಕಾಲಿವುಡ್‌ನಲ್ಲಿ ಸದ್ದು ಮಾಡಿ ಬಾಲಿವುಡ್‌ನಲ್ಲಿಯೂ ಸುದ್ದಿ ಮಾಡುತ್ತಿರುವ ಶ್ರದ್ಧಾ ಶ್ರೀನಾಥ್ ಮತ್ತೆ ಕನ್ನಡ ಚಿತ್ರರಂಗದತ್ತ ಹೊರಳಿದ್ದಾರೆ. ಹಾಗಾದರೆ ಅವರೇನು ಚಂದನವನ ಬಿಟ್ಟು ಹೋಗಿದ್ದರೆ? ಹಾಗೇನಿಲ್ಲ, ಶಿವರಾಜ್‌ಕುಮಾರ್ ಅಭಿನಯದ 'ರುಸ್ತುಂ' ಸಿನಿಮಾದಲ್ಲಿ ನಟಿಸಿದ್ದರು. ನೀನಾಸಂ ಸತೀಶ್ ಜೊತೆ 'ಗೋದ್ರಾ' ಸಿನಿಮಾದಲ್ಲಿಯೂ ತೆರೆಯನ್ನು ಹಂಚಿಕೊಂಡಿದ್ದಾರೆ. ಗೋದ್ರಾ ಇನ್ನಷ್ಟೇ ಬಿಡುಗಡೆಯಾಗಬೇಕಿದೆ. ಈ ಚಿತ್ರಗಳ ನಂತರ ಬೇರೆ ಕನ್ನಡ ಸಿನಿಮಾಗಳನ್ನು ಒಪ್ಪಿಕೊಂಡ ಸುದ್ದಿ ಇರಲಿಲ್ಲ. ಇದೀಗ ಅವರು ರಿಷಭ್ ಶೆಟ್ಟಿ ಅವರ 'ರುದ್ರ ಪ್ರಯಾಗ'ದ ತಂಡ ಸೇರಿಕೊಂಡು ಕಾಡು ಮೇಡು ಅಲೆಯುತ್ತಿರುವ ಸುದ್ದಿ ಬಂದಿದೆ.

'ರುದ್ರ ಪ್ರಯಾಗ' ಸಿನಿಮಾದಲ್ಲಿ ಶ್ರದ್ಧಾ, ಅರಣ್ಯ ಅಧಿಕಾರಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಕಥೆಯಲ್ಲಿನ ಮಹತ್ವದ ಹೊರಳುಗಳಿಗೆ ಕಾರಣವಾಗುವ ವಿಭಿನ್ನ ಮತ್ತು ಪ್ರಮುಖ ಪಾತ್ರ ಅವರದಂತೆ. 'ಅರಣ್ಯದ ಬಗ್ಗೆ ಅಪಾರ ಕಾಳಜಿ ಉಳ್ಳ ಆರ್‌ಎಫ್‌ಓ ಅಧಿಕಾರಿಯಾಗಿ ಶ್ರದ್ಧಾ ಶ್ರೀನಾಥ್ ನಟಿಸುತ್ತಿದ್ದಾರೆ. ಇಂಥ ಪಾತ್ರಗಳಲ್ಲಿ ಅವರು ಹಿಂದೆಂದೂ ಕಾಣಿಸಿಕೊಂಡಿಲ್ಲ' ಎಂದು ನಿರ್ದೇಶಕ ರಿಷಭ್, ವಿವರಣೆಯನ್ನೂ ನೀಡಿದ್ದಾರೆ.

ಜಯಣ್ಣ ಮತ್ತು ಭೋಗೇಂದ್ರ ಹಣ ಹೂಡುತ್ತಿರುವ 'ರುದ್ರ ಪ್ರಯಾಗ'ದಲ್ಲಿ ಅನಂತ್‌ನಾಗ್ ಕೂಡ ಒಂದು ವಿಶೇಷ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಡಿಸೆಂಬರ್‌ನಲ್ಲಿ ಚಿತ್ರದ ಚಿತ್ರೀಕರಣ ಪ್ರಾರಂಭಿಸಲು ತಂಡ ಯೋಜನೆ ಹಾಕಿಕೊಂಡಿದ್ದಾರೆ. ■

